**ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಸಭಾಂಗಣದಲ್ಲಿ ದಿನಾಂಕ 20-9-2011 ರಂದು ಜರುಗಿದ ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ವ್ಯವಸ್ಥಾಪನಾ ಮಂಡಳಿಯ ಆರನೇಯ ಸಭೆಯ ನಡುವಳಿಗಳು:**

**ಉಪಸ್ಥಿತರಿದ್ದ ಸದಸ್ಯರು:**

| | | |
|---|---|---|
| 1. | ಡಾ. ಬಿ.ವಿ. ಪಾಟೀಲ | ಅಧ್ಯಕ್ಷರು |
| 2. | ಡಾ. ಸಂದೀಪ್ ದವೆ | ಸದಸ್ಯರು |
| 3. | ಡಾ. ಬಾಬುರಾವ್ ಮುಡಬಿ | ಸದಸ್ಯರು |
| 4. | ಶ್ರೀ ಅಶೋಕ ಜೇವರ್ಗಿ | ಸದಸ್ಯರು |
| 5. | ಶ್ರೀ ಅಲ್ಲಮಪ್ರಭು ಪಾಟೀಲ | ಸದಸ್ಯರು |
| 6. | ಶ್ರೀ ಶಂಕರಗೌಡ ಹರವಿ | ಸದಸ್ಯರು |
| 7. | ಶ್ರೀ ಭೋಜನಗೌಡ | ಸದಸ್ಯರು |
| 8. | ಶ್ರೀ ವೆಂಕನಗೌಡ ಮಲ್ಕಾಪುರ | ಸದಸ್ಯರು |
| 9. | ಶ್ರೀ ಶಿವಪ್ಪ ಬಿ. ಬಲ್ಲಿದವ | ಸದಸ್ಯರು |
| 10. | ಶ್ರೀ ಹನುಮೇಶ ನಾಯಕ | ಸದಸ್ಯರು |
| 11. | ಡಾ. ಚಲ್ಲಯ್ಯ | ಸದಸ್ಯರು |
| 12. | ಶ್ರೀ ಬಸವರಾಜಪಾಟೀಲ ಇಟಗಿ | ಸದಸ್ಯರು |
| 13. | ಶ್ರೀ ಜಿ. ತಿಮ್ಮನಗೌಡ ಪಾಟೀಲ್ | ಸದಸ್ಯರು |
| 14. | ಡಾ. ಎಸ್.ಜಿ. ಪಾಟೀಲ | ಸದಸ್ಯರು |
| 15. | ಡಾ. ಪಿ. ಬಾಲಕೃಷ್ಣನ್ | ಸದಸ್ಯ-ಕಾರ್ಯದರ್ಶಿ |

ಪ್ರಾರಂಭದಲ್ಲಿ ಮಾನ್ಯ ಕುಲಪತಿಗಳು ಹಾಗೂ ವ್ಯವಸ್ಥಾಪನಾ ಮಂಡಳಿಯ ಅಧ್ಯಕ್ಷರು ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ವ್ಯವಸ್ಥಾಪನಾ ಮಂಡಳಿಯ ಆರನೇಯ ಸಭೆಗೆ ಸರ್ವಸದಸ್ಯರನ್ನು ಸ್ವಾಗತಿಸಿ ಸಭೆಯನ್ನು ಪ್ರಾರಂಭಿಸಿದರು. ಕಾರ್ಯಸೂಚಿಯ ವಿಷಯವಾರು ಪ್ರಕಾರ ಚರ್ಚಿಸಿ ಕೆಳಕಂಡಂತೆ ತೀರ್ಮಾನಗಳನ್ನು ಕೈಗೊಳ್ಳಲಾಯಿತು.

| ಅನುಕ್ರಮ ಸಂ: 1 | **ದಿನಾಂಕ 12-5-2011 ರಂದು ಜರುಗಿದ ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಐದನೇಯ ಸಭೆಯ ನಡುವಳಿಗಳನ್ನು ಸ್ಥಿರೀಕರಿಸುವುದು ಮತ್ತು ಅವುಗಳ ಪ್ರಕಾರ ಕೈಗೊಂಡ ಕ್ರಮಗಳಿಗೆ ಅನುಮೋದನೆ ನೀಡುವುದು.** |
|---|---|

ಕೃಷಿ ಸಂಶೋಧನಾ ಕೇಂದ್ರ, ರದ್ದೇವಾಡಿಗಿಯಲ್ಲಿ ನಿರ್ಮಾಣವಾಗುತ್ತಿರುವ ಕಟ್ಟಡದ ಸೋರುವಿಕೆಯ ಕುರಿತು ಚರ್ಚಿಸುವಾಗ, ಕಾರ್ಯನಿರ್ವಾಹಕ ಅಭಿಯಂತರರ ಹಾಗೂ ಸದರಿ ಕೇಂದ್ರದ ಮುಖ್ಯಸ್ಥರ ವರದಿಯನ್ವಯ ಅಲ್ಲಿ ಈ ರೀತಿಯ ಸೋರಿಕೆ ಇಲ್ಲವೆಂದು ಅಧ್ಯಕ್ಷರು ದೃಢಪಡಿಸಿದರು. ಇದಾದ ನಂತರ, ವಿಶೇಷ ಘಟಕ ಯೋಜನೆ (ಎಸ್.ಸಿ.ಪಿ) ಹಾಗೂ ಗಿರಿಜನ ಉಪ ಯೋಜನೆ (ಟಿ.ಎಸ್.ಪಿ.) ಗಳ ಅನುದಾನದ ಬಳಕೆ, ಹಂಚಿಕೆ ಮತ್ತು ಸದರಿ ಯೋಜನೆಗಳಲ್ಲಿ ಕೈಗೊಳ್ಳಲಾದ ಚಟುವಟಿಕೆಗಳ ಬಗ್ಗೆ ಚರ್ಚಿಸಲಾಯಿತು. ಮಾನ್ಯ ಸದಸ್ಯರಾದ ಡಾ. ಸಂದೀಪ್ ದವೆ, ಕಾರ್ಯದರ್ಶಿಗಳು (ಕೃಷಿ) ಅವರು ತ್ರೈಮಾಸಿಕ ಅವಧಿಯಂತೆ ಸಮವರ್ತಿಯಾಗಿ ಭೌತಿಕ ಪರಿಶೀಲನೆ ಮತ್ತು ಕರ್ನಾಟಕ ಆರ್ಥಿಕ ಸಂಹಿತೆ (ಕೆ.ಎಫ್.ಸಿ.) ಪ್ರಕಾರ ಹಣಕಾಸಿನ ವ್ಯವಹಾರದ ಲೆಕ್ಕಪರಿಶೋಧನೆ ಮಾಡಿಸಲು ಸಲಹೆ ನೀಡಿದರು, ಇದರಿಂದಾಗಿ ಪಾರದರ್ಶಕತೆಯನ್ನು ಕಾಪಾಡಿಕೊಳ್ಳಲು ಅನುಕೂಲವಾಗುವುದು, ಮತ್ತು ಸಮಯಕ್ಕನುಸಾರ ಲೋಪದೋಷಗಳನ್ನು ಸರಿಪಡಿಸಿಕೊಂಡು ಯೋಜನೆಗಳನ್ನು ಸುಸೂತ್ರವಾಗಿ ಹಾಗೂ ಯಶಸ್ವಿಯಾಗಿ ಕಾರ್ಯರೂಪಕ್ಕೆ ತರಲು, ಹಾಗೂ ವಿಶ್ವವಿದ್ಯಾಲಯವು ಕಾರ್ಯರೂಪಕ್ಕೆ ತರುತ್ತಿರುವ ಇಂತಹ ಯೋಜನೆಗಳಲ್ಲಿ ಉದ್ಭವಿಸುವ ಆಕ್ಷೇಪಣೆಗಳಿಗೆ ಉತ್ತರಿಸಲು ಅನುಕೂಲವಾಗುತ್ತದೆ. ಮುಂದುವರೆದು ಇಂತಹ ಯೋಜನೆಗಳ ಕಾರ್ಯಚಟುವಟಿಕೆಗಳ ಕುರಿತು ತ್ರೈಮಾಸಿಕ

ವರದಿಗಳನ್ನು ಸಲ್ಲಿಸುವಂತೆ ಸಲಹೆ ನೀಡಿದರು. ಎಸ್.ಸಿ.ಪಿ. ಮತ್ತು ಟಿ.ಎಸ್.ಪಿ. ಯೋಜನೆಯ ಕುರಿತಾದ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಸದಸ್ಯರ ಸಮಿತಿಯ ವರದಿ ಸಲ್ಲಿಸಿದ ನಂತರವೇ ಕ್ರಮ ಕೈಗೊಳ್ಳುವಂತೆ ಸರ್ವಾನುಮತದಿಂದ ತೀಮಾನಿಸಲಾಯಿತು. ಮುಂದಿನ ಸಭೆಯಲ್ಲಿ ಈ ಕುರಿತು ಚರ್ಚಿಸುವ ಸಲುವಾಗಿ ಆದಷ್ಟು ಬೇಗ ವರದಿಯನ್ನು ಸಲ್ಲಿಸಲು ಘನ ವೇದಿಕೆಯು ಸಲಹೆ ನೀಡಿತು. ವಿವಿಧ ವಿಷಯಗಳನ್ನು ಚರ್ಚಿಸುವಾಗ ಈ ಕೆಳಕಂಡ ಸಲಹೆಗಳು / ತೀರ್ಮಾನಗಳನ್ನು ಕೈಗೊಳ್ಳಲಾಯಿತು.

ವಿಶ್ವವಿದ್ಯಾಲಯದಲ್ಲಿ ಕೈಗೊಳ್ಳಲಾದ ಶೈಕ್ಷಣಿಕ, ಸಂಶೋಧನೆ/ಯೋಜನೆ ಮತ್ತು ವಿಸ್ತರಣೆ ಚಟುವಟಿಕೆಗಳನ್ನು ಮಾನ್ಯ ಸದಸ್ಯರುಗಳಿಗೆ ತಿಳಿಯಪಡಿಸುವ ಸಲುವಾಗಿ ಸಂಬಂಧಪಟ್ಟ ಅಧಿಕಾರಿಗಳು 2 ರಿಂದ 3 ಪ್ರಮುಖಾಂಶಗಳನ್ನು ಮಂಡಿಸಲು ಮಾನ್ಯ ಸದಸ್ಯರುಗಳು ಸಲಹೆ ನೀಡಿದರು.

ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಕೃಷಿ ಮೇಳವನ್ನು ಅಕ್ಟೋಬರ್ 14 ರಿಂದ 16, 2011 ವರೆಗೆ ಏರ್ಪಡಿಸಲಾಗುವುದೆಂದು ಅಧ್ಯಕ್ಷರು ಘನ ವೇದಿಕೆಯ ಅವಗಾಹನೆಗೆ ತಂದರು ಮತ್ತು ಕೃಷಿ ಮೇಳದ ಉದ್ಘಾಟನೆಗೆ ಮಾನ್ಯ ಮುಖ್ಯ ಮಂತ್ರಿಗಳು, ಮಾನ್ಯ ಕೃಷಿ ಮಂತ್ರಿಗಳು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರನ್ನು ಕೃಷಿ ಮೇಳದ ಎರಡನೇಯ ದಿನದಂದು ಭಾಗವಹಿಸಲು ಆಹ್ವಾನಿಸಲಾಗುವುದೆಂದು ತಿಳಿಯಪಡಿಸಿದರು.

ಈ ಭಾಗದ ರೈತಾಪಿ ಸಮುದಾಯದ ಉತ್ತಮ ಸೇವೆಗಾಗಿ ಕೃಷಿ ತಾಂತ್ರಿಕ ಮಹಾವಿದ್ಯಾಲಯವನ್ನು ಭೂಪಾಲದಲ್ಲಿರುವ ಕೇಂದ್ರೀಯ ಕೃಷಿ ತಾಂತ್ರಿಕ ಸಂಸ್ಥೆಯ (CIAE) ಮಟ್ಟಕ್ಕೇರಿಸುವ ಸಂಬಂಧವಾಗಿ ಸೂಕ್ತ ಹಾಗೂ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲು ಸಲಹೆ ನೀಡಲಾಯಿತು.

ಉತ್ತಮ ಫಲಿತಾಂಶ ಪಡೆಯಲು / ಒಳ್ಳೇಯ ರೀತಿಯಲ್ಲಿ ಮುಕ್ತಾಯಗೊಳಿಸಿ ರೈತಾಪಿ ವರ್ಗದವರು ಬಹಳಷ್ಟು ಲಾಭ ಪಡೆಯುವ ಸಲುವಾಗಿ ಸಮಗ್ರ ಕೃಷಿ ಪದ್ಧತಿ ಕಾರ್ಯಕ್ರಮವನ್ನು ಕನಿಷ್ಟ ಪಕ್ಷ ಮೂರು ವರ್ಷಗಳವರೆಗೆ ಮುಂದುವರೆಸಲು ಮಾನ್ಯ ಸದಸ್ಯರುಗಳು ಸಲಹೆ ನೀಡಿದರು. ಮುಂದುವರೆದು, ಸಮಗ್ರ ಕೃಷಿ ಪದ್ಧತಿ ಕಾರ್ಯಕ್ರಮಗಳಲ್ಲಿ ಕುರಿ ಸಾಕಾಣೆ ಸಹ ಒಂದು ಅಂಶವನ್ನಾಗಿ ಸೇರಿಸಲು ಸಲಹೆ ನೀಡಿದರು.

ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಕೋಷ ಸ್ಥಾಪಿಸಿ ಅದಕ್ಕಾಗಿ ಪ್ರತ್ಯೇಕವಾಗಿ ಕಟ್ಟಡವನ್ನು ನಿರ್ಮಿಸುವ ಸಲುವಾಗಿ ಎಸ್.ಸಿ.ಪಿ. ಹಾಗೂ ಟಿ.ಎಸ್.ಪಿ. ಯೋಜನೆಗಳಲ್ಲಿ ಉಳಿತಾಯವಾದ ಹಣವನ್ನು ಉಪಯೋಗಿಸಿಕೊಳ್ಳಲು ಬಹಳಷ್ಟು ಸದಸ್ಯರು ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

ಆಸಕ್ತ ವಿದ್ಯಾರ್ಥಿಗಳ ಭವಿಷ್ಯ ಹಾಗೂ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಅನುಕೂಲ ಮಾಡಿಕೊಡುವ ಸಲುವಾಗಿ ಡಿಪ್ಲೋಮ ವಿದ್ಯಾರ್ಥಿಗಳಿಗೆ ಇತರೇ ಸ್ನಾತಕ ಪದವಿ ಕಾರ್ಯಕ್ರಮಗಳಲ್ಲಿ ಪ್ರವೇಶ ಪಡೆಯಲು ಅವಕಾಶಗಳನ್ನು ಕಲ್ಪಿಸುವ ಕುರಿತು ಭಾರತ ಸರಕಾರ ಹಾಗೂ ಕರ್ನಾಟಕ ಸರ್ಕಾರದ ಸಂಬಂಧಪಟ್ಟ ಇಲಾಖೆಗಳಿಗೆ ವಿಶ್ವವಿದ್ಯಾಲಯವು ಮತ್ತೊಮ್ಮೆ ವಿನಂತಿ ಪತ್ರವನ್ನು ಬರೆಯಲು ಮಾನ್ಯ ಸದಸ್ಯರಾದ ಶ್ರೀ ಶಂಕರಗೌಡ ಹರವಿಯವರು ಸಲಹೆ ನೀಡಿದರು.

ಕೃಷಿ ಮಹಾವಿದ್ಯಾಲಯ, ಭೀಮರಾಯನಗುಡಿಯಲ್ಲಿ ಫೆಬ್ರುವರಿ 2011 ರಲ್ಲಿ ಜರುಗಿದ ಘಟನೆಗಳಿಗೆ ಸಂಬಂಧಿಸಿದಂತೆ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಸದಸ್ಯರ ಸಮಿತಿಯ ವರದಿಗಾಗಿ ನಿರೀಕ್ಷಿಸುತ್ತಿದ್ದು, ವರದಿ ಸಲ್ಲಿಸಿದ ನಂತರ ಇದನ್ನು ವ್ಯವಸ್ಥಾಪನಾ ಮಂಡಳಿಯ ಮುಂದಿನ ಸಭೆಯಲ್ಲಿ ಚರ್ಚಿಸಲಾಗುವುದು.

ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಅಧಿಕಾರಿಗಳ ಹುದ್ದೆಗಳನ್ನು ಆದಷ್ಟು ಬೇಗ ಅಧಿಸೂಚಿಸಲು ಮತ್ತು ಭರ್ತಿ ಮಾಡಿಕೊಳ್ಳುವಾಗ ರಾಜ್ಯದ ಎಲ್ಲಾ ಕೃಷಿ ವಿಶ್ವವಿದ್ಯಾಲಯಗಳಿಗೆ ಅನ್ವಯವಾಗುವ ಆಯ್ಕೆಗಾಗಿ ಇರುವ ಏಕರೂಪದ ಸ್ಕೋರ್ ಕಾರ್ಡ್‌ಅನ್ನು ಅನುಸರಿಸಲು ಮಾನ್ಯ ಸದಸ್ಯರುಗಳು ಸಲಹೆ ನೀಡಿದರು.

ಸಿ.ಎ.ಎಸ್.–2006 ನ ಹೊಸ ಮಾರ್ಗಸೂಚಿಗಳನ್ನು ಯು.ಜಿಸಿ./ಐ.ಸಿ.ಎ.ಆರ್. ನವರು ಇನ್ನೂ ಅಂತಿಮಗೊಳಿಸಿರುವುದಿಲ್ಲ, ಅವುಗಳು ಸ್ವೀಕೃತವಾದ ತಕ್ಷಣವೇ ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಶಿಕ್ಷಕರುಗಳಿಗೆ ಮುಂಬಡ್ತಿಗಾಗಿ ಸರಕಾರದ ಆದೇಶ ದಿನಾಂಕ (24–3–2010) ದಿಂದಲೇ ಜಾರಿಗೊಳಿಸಲಾಗುವುದೆಂದು ಅಧ್ಯಕ್ಷರು ತಿಳಿಸಿದರು.

ಇತ್ತೀಚಿಗೆ ಅಧಿಸೂಚಿಸಿದ ಸೇವಾ ಸಿಬ್ಬಂದಿಯವರ ಖಾಲಿ ಇರುವ ಹುದ್ದೆಗಳನ್ನು ಎರಡು ತಿಂಗಳೊಳಗಾಗಿ ಭರ್ತಿ ಮಾಡಿಕೊಳ್ಳಲಾಗುವುದೆಂದು ಅಧ್ಯಕ್ಷರು ತಿಳಿಸಿದರು.

**ಠರಾವು:**

ವಿಸ್ತೃತವಾದ ಚರ್ಚೆಯ ನಂತರ ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಐದನೇಯ ಸಭೆಯ ನಡುವಳಿಗಳನ್ನು ಓದಲಾಯಿತೆಂದು ಪರಿಗಣಿಸಿ, ಸ್ಥಿರೀಕರಿಸಿ ಕೈಕೊಂಡ ಕ್ರಮಗಳಿಗೆ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು.

| | |
|---|---|
| ಅನುಕ್ರಮ ಸಂ: 2 | **ಶ್ರೀ ರವಿ ಆರ್. ಮೇಸ್ತಾ ಇವರನ್ನು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರ (ಸಿವಿಲ್) ಹುದ್ದೆಯಿಂದ ಕಾರ್ಯನಿರ್ವಾಹಕ ಅಭಿಯಂತರರ (ಸಿವಿಲ್) ಹುದ್ದೆಗೆ ಮುಂಬಡ್ತಿ ನೀಡಲು ಅನುಮತಿ ಕೊಡುವ ಕುರಿತು** |

**ಠರಾವು:**

ಕೃಷಿ ವಿಶ್ವವಿದ್ಯಾಲಯ ಧಾರವಾಡದಿಂದ ಕೃಷಿ ವಿಶ್ವವಿದ್ಯಾಲಯ ರಾಯಚೂರು ವಿಭಜನೆಗೊಳ್ಳುವ ಸಂದರ್ಭದಲ್ಲಿ ಕಾರ್ಯನಿರ್ವಾಹಕ ಅಭಿಯಂತರರ (ಸಿವಿಲ್) ಹುದ್ದೆಯ ವರ್ಗಾವಣೆ ಕುರಿತಾದ ವಿಷಯವನ್ನು ಶ್ರೀ ಬಿ.ಡಿ. ಚವಾಣ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರ (ಸಿವಿಲ್), ಕೃವಿವಿ ಧಾರವಾಡ ಅವರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಪೆಟಿಶನ್ ಸಲ್ಲಿಸಿರುವುದರಿಂದ, ಅದರ ತೀರ್ಪನ್ನು ನಿರೀಕ್ಷೆಯಲ್ಲಿಟ್ಟು ವ್ಯವಸ್ಥಾಪನಾ ಮಂಡಳಿಯ ಮುಂದಿನ ಸಭೆಯವರೆಗೆ ನಿರ್ಧಾರವನ್ನು ಮುಂದೂಡಲು ಸುದೀರ್ಘ ಚರ್ಚೆಯ ನಂತರ ತೀರ್ಮಾನಿಸಲಾಯಿತು.

| | |
|---|---|
| ಅನುಕ್ರಮ ಸಂ: 3 | **ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ವಿವಿಧ ಆವರಣಗಳಲ್ಲಿ ಹತ್ತು ಲಕ್ಷ ರೂಪಾಯಿಗಳಿಗೂ ಮೀರಿದ ಸಿವಿಲ್ ಕಾಮಗಾರಿಗಳನ್ನು ಕೈಗೊಳ್ಳಲು ಅನುಮೋದನೆ ಕುರಿತು** |

**ಠರಾವು:**

ಅನುಕ್ರಮ ಸಂಖ್ಯೆ 1 ರಿಂದ 10 ರವರೆಗೆ ಪಟ್ಟಿ ಮಾಡಿದ ಕಾಮಗಾರಿಗಳನ್ನು ಕಡಿಮೆ ದರ ನಮೂದಿಸಿದ ಅರ್ಹ ಬಿಡ್‌ದಾರರುಗಳಿಂದ ಕೈಗೊಳ್ಳಲು ಆದೇಶಗಳನ್ನು ನೀಡಲು ದೀರ್ಘ ಚರ್ಚೆಯ ನಂತರ ಘನ ವೇದಿಕೆಯು ಅನುಮೋದನೆ ನೀಡಿತು. ಮುಂದುವರೆದು ಈಗಾಗಲೇ ಅನುಮೋದನೆ ನೀಡಿದ / ಮುಂದುವರೆದ ಕಾಮಗಾರಿಗಳಲ್ಲಿ ಉಳಿತಾಯವಾದ ಹಣದಿಂದ ಕೈಗೊಳ್ಳಲಾಗುವ ಹೆಚ್ಚುವರಿ ಕಾಮಗಾರಿಗಳಿಗೆ ಪ್ರತ್ಯೇಕವಾಗಿ ಟೆಂಡರ್‌ಗಳನ್ನು ಕರೆಯಲು ಸಲಹೆ ನೀಡಿದರು. ಈ ಸಂದರ್ಭದಲ್ಲಿ ಅಧ್ಯಕ್ಷರು ಈ ಕುರಿತು ಪಿ.ಡಬ್ಲ್ಯು.ಡಿ. ಅವರಿಂದ ಪರಿಶೀಲಿಸಲು / ದೃಢಪಡಿಸಿಕೊಳ್ಳಲು ಕಾರ್ಯನಿರ್ವಾಹಕ ಅಭಿಯಂತರರರಿಗೆ ನಿರ್ದೇಶಿಸಲಾಗುವುದೆಂದು ತಿಳಿಸಿದರು. ಇದಲ್ಲದೆ, ಕಾಮಗಾರಿಗಳ ಗುಣವತ್ತತೆಯನ್ನು ದೃಢಪಡಿಸಿಕೊಳ್ಳುವ ಸಲುವಾಗಿ ಸೂಕ್ತ ಚಾರ್ಜ್‌ಗಳೇನಾದರೂ ಇದ್ದರೆ ಪಾವತಿ ಮಾಡಿ ಎಲ್ಲಾ ಸಿವಿಲ್ ಕಾಮಗಾರಿಗಳ ಗುಣವತ್ತತೆ ಪ್ರಮಾಣ ಪತ್ರವನ್ನು ನೊಂದಾಯಿತ ಏಜೆನ್ಸಿಯವರಿಂದ

ಪಡೆಯಲು ಒತ್ತಾಯಪಡಿಸಿದರು. ಇನ್ನು ಮುಂದೆ ಆಸ್ತಿ ವಿಭಾಗದಿಂದ ತಯಾರಿಸಿದ ಅಂದಾಜು ಪ್ರತಿಗಳನ್ನು ಟೆಂಡರ್‌ಗಾಗಿ ಕಳುಹಿಸುವುದಕ್ಕಿಂತ ಮುಂಚೆ ಪಿ.ಡಬ್ಲ್ಯು.ಡಿ. ಇಂಜಿನಿಯರುಗಳವರಿಂದ ಮರು–ಪರಿಶೀಲನೆ ಮಾಡಿಸಲು ನಿರ್ಣಯಿಸಲಾಯಿತು.

(ಕ್ರಮ : ಕಾರ್ಯನಿರ್ವಾಹಕ ಅಭಿಯಂತರರು)

| | |
|---|---|
| ಅನುಕ್ರಮ ಸಂ: 4 | **ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಆಡಳಿತ ಭವನದ ನಿರ್ಮಾಣಕ್ಕಾಗಿ ವಾಸ್ತುಶಿಲ್ಪಿಗಾರರ ಶುಲ್ಕವನ್ನು ಮೆ: ವೈಷ್ಣವಿ ಕನ್ಸಲ್ಟಂಟ್, ಹುಬ್ಬಳ್ಳಿ ಇವರಿಗೆ ಪಾವತಿಸಲು ಅನುಮೋದನೆ ಕುರಿತು** |

**ಠರಾವು:**

ಆಡಳಿತ ಭವನದ ನಿರ್ಮಾಣಕ್ಕಾಗಿ ವಾಸ್ತುಶಿಲ್ಪಿಗಾರರ ಸೇವೆಯನ್ನು ಪಡೆಯುವ ಸಲುವಾಗಿ ಮೆ: ವೈಷ್ಣವಿ ಕನ್ಸಲ್ಟಂಟ್, ಹುಬ್ಬಳ್ಳಿ ಇವರಿಗೆ ಸೇವಾ ಶುಲ್ಕ ರೂ. 27.78 ಲಕ್ಷವನ್ನು (ಆಡಳಿತ ಭವನದ ಅಂದಾಜು ಮೊತ್ತ ರೂ. 18.52 ಕೋಟಿಯ ಶೇಕಡ 1.5 ರಂತೆ) ನಿರ್ಮಾಣದ ವಿವಿಧ ಹಂತಗಳಲ್ಲಿ ಒಪ್ಪಂದದ ಮೇರೆಗೆ ಪಾವತಿಸಲು ಘನ ವೇದಿಕೆಯು ಸರ್ವಾನುಮತದಿಂದ ಅನುಮೋದನೆ ನೀಡಿತು.

(ಕ್ರಮ : ಹಣಕಾಸು ನಿಯಂತ್ರಣಾಧಿಕಾರಿಗಳು/ಕಾರ್ಯನಿರ್ವಾಹಕ ಅಭಿಯಂತರರು)

| | |
|---|---|
| ಅನುಕ್ರಮ ಸಂ: 5 | **ಅಂತರರಾಷ್ಟ್ರೀಯ ತರಬೇತಿಗಳಲ್ಲಿ ಭಾಗವಹಿಸಲು / ಅಂತರರಾಷ್ಟ್ರೀಯ ಸಮ್ಮೇಳನಗಳಲ್ಲಿ ಪ್ರಬಂಧಗಳನ್ನು ಮಂಡಿಸಲು ಶಿಕ್ಷಕರು / ವಿಜ್ಞಾನಿಗಳಿಗೆ ವಿದೇಶಗಳಿಗೆ ಪ್ರತಿನಿಯೋಜನೆ ಮಾಡುವ ಕುರಿತು.** |

**ಠರಾವು:**

ಶಿಕ್ಷಕರು / ವಿಜ್ಞಾನಿಗಳಿಗೆ ಅಂತರರಾಷ್ಟ್ರೀಯ ತರಬೇತಿಯಲ್ಲಿ ಭಾಗವಹಿಸಲು / ಅಂತರರಾಷ್ಟ್ರೀಯ ಸಮ್ಮೇಳನಗಳಲ್ಲಿ ಪ್ರಬಂಧಗಳನ್ನು ಮಂಡಿಸಲು ವಿದೇಶಗಳಿಗೆ ಪ್ರತಿನಿಯೋಜನೆ ಮಾಡಿದ ವಿಷಯಗಳನ್ನು ಪ್ರಸ್ತಾಪಿಸಿದಂತೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಸರ್ವಾನುಮತದಿಂದ ಅನುಮೋದನೆ ನೀಡಿದ್ದು ಈ ಕುರಿತು ಕೈಗೊಂಡ ಕ್ರಮಕ್ಕೆ ಅನುಸಮರ್ಥನೆ ನೀಡಲಾಯಿತು. ಸದರಿ ತರಬೇತಿಗಳು ವಿಶ್ವವಿದ್ಯಾಲಯಕ್ಕೆ ಹಾಗೂ ರೈತರಿಗೆ ಉಪಯೋಗವಾಗಬೇಕೆಂದು ಘನ ವೇದಿಕೆಯು ಸಲಹೆ ನೀಡಿತು.

| | |
|---|---|
| ಅನುಕ್ರಮ ಸಂ: 6 | **ಉನ್ನತ ವ್ಯಾಸಂಗವಾದ ಪಿ.ಹೆಚ್.ಡಿ. ಪದವಿಯ ಅಧ್ಯಯನಕ್ಕಾಗಿ 2011–'12 ನೇ ಸಾಲಿನಲ್ಲಿ ಸೇವಾನಿರತ ಶಿಕ್ಷಕರು / ವಿಜ್ಞಾನಿಗಳಿಗೆ ಪ್ರತಿನಿಯೋಜನೆ ಸೌಲಭ್ಯವನ್ನು ನೀಡುವ ಕುರಿತು.** |

**ಠರಾವು:**

ಕೃವಿವಿ ರಾಯಚೂರಿನ ಇಬ್ಬರು ಶಿಕ್ಷಕರುಗಳಿಗೆ ಮೂರು ಸೆಮಿಸ್ಟರ್‌ಗಳ "Sandwich Programme" ಅಡಿಯಲ್ಲಿ ಇತರೇ ವಿಶ್ವವಿದ್ಯಾಲಯಗಳಿಗೆ ಹಾಗೂ ಮೂರು ಶಿಕ್ಷಕರುಗಳಿಗೆ ಎರಡು ಸೆಮಿಸ್ಟರ್‌ಗಳ ಇದೇ ವಿಶ್ವವಿದ್ಯಾಲಯದಲ್ಲಿ ಉನ್ನತ ವ್ಯಾಸಂಗವಾದ ಪಿ.ಹೆಚ್.ಡಿ. ಪದವಿಯ ಅಧ್ಯಯನಕ್ಕಾಗಿ ಪ್ರತಿನಿಯೋಜಿಸಲು ಪ್ರಸ್ತಾಪಿಸಿದಂತೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಸರ್ವಾನುಮತದಿಂದ ಅನುಮೋದನೆ ನೀಡಿದ್ದು ಈ ಕುರಿತು ಕೈಗೊಂಡ ಕ್ರಮಕ್ಕೆ ಅನುಸಮರ್ಥನೆ ನೀಡಲಾಯಿತು.

| | |
|---|---|
| ಅನುಕ್ರಮ ಸಂ: 7 | **ಹತ್ತು ಲಕ್ಷ ರೂಪಾಯಿಗಳಿಗೂ ಮೀರಿದ ಹೊಸ ಸಿವಿಲ್ ಕಾಮಗಾರಿಗಳನ್ನು ಕೈಗೊಳ್ಳಲು ಅನುಮೋದನೆ ಕುರಿತು.** |

**ಠರಾವು:**

ಅನುಕ್ರಮ ಸಂಖ್ಯೆ 1 ರಿಂದ 2 ರವರೆಗೆ ಪಟ್ಟಿ ಮಾಡಿದ ಕಾಮಗಾರಿಗಳನ್ನು ಕೈಗೊಳ್ಳಲು ಘನ ವೇದಿಕೆಯು ಸರ್ವಾನುಮತದಿಂದ ಅನುಮೋದನೆ ನೀಡಿತು. ಮುಂದುವರೆದು, ಕಾರ್ಯದರ್ಶಿಗಳು (ಕೃಷಿ) ಅವರ ಸಲಹೆಯಂತೆ ವಿವಿಧ ರೀತಿಯ ಅಡಚಣೆಗಳನ್ನು ತಪ್ಪಿಸಲು ಇನ್ನೂ ಮುಂದೆ ವಿಶ್ವವಿದ್ಯಾಲಯದ ಎಲ್ಲಾ ಸಿವಿಲ್ ಕಾಮಗಾರಿಗಳನ್ನು ಸರಕಾರದ ಇ–ಪ್ರೊಕ್ಯೂರ್‌ಮೆಂಟ್ / ಟೆಂಡರಿಂಗ್ ಏಜೆನ್ಸಿಯವರಿಗೆ ವಹಿಸಿಕೊಡಲು ತೀರ್ಮಾನಿಸಿತು. ಇದಕ್ಕೆ ಅಧ್ಯಕ್ಷರು ತಕ್ಷಣವೇ ಒಪ್ಪಿಕೊಂಡು, ಕೃವಿವಿ ರಾಯಚೂರು ಹಾಗೂ ಮೆ. ಕಿಯೋನಿಕ್ಸ್ ಜೊತೆ ಈ ಸಂಬಂಧವಾಗಿ ಮಾಡಿಕೊಂಡ ಒಪ್ಪಂದವು ಆಗಸ್ಟ್–2011 ರಂದು ಮುಕ್ತಾಯವಾಗಿರುತ್ತದೆಯೆಂದು ತಿಳಿಸಿದರು.

(ಕ್ರಮ : ಕಾರ್ಯನಿರ್ವಾಹಕ ಅಭಿಯಂತರರು)

| ಅನುಕ್ರಮ ಸಂ: 8 | **ಕೃಷಿ ಸಂಶೋಧನಾ ಕೇಂದ್ರ ಗುಲಬರ್ಗಾದಲ್ಲಿ ಕೃಷಿ ಮಹಾವಿದ್ಯಾಲಯವನ್ನು ಸ್ಥಾಪಿಸುವ ಕುರಿತು** |
|---|---|

**ಠರಾವು:**

ಕೃಷಿ ಸಂಶೋಧನಾ ಕೇಂದ್ರ ಗುಲಬರ್ಗಾದಲ್ಲಿ ಕೃಷಿ ಮಹಾವಿದ್ಯಾಲಯವನ್ನು ಸ್ಥಾಪಿಸುವ ಹಾಗೂ ಅನುಕ್ರಮ ಸಂಖ್ಯೆ 1 ರಿಂದ 6 ರವರೆಗೆ ಪಟ್ಟಿ ಮಾಡಿದ ಕಾಮಗಾರಿಗಳನ್ನು ಕೈಗೊಳ್ಳಲು ಘನ ವೇದಿಕೆಯು ಸರ್ವಾನುಮತದಿಂದ ಅನುಮೋದನೆ ನೀಡಿತು. ಗುಲಬರ್ಗಾದ ಕೃಷಿ ಮಹಾವಿದ್ಯಾಲಯವನ್ನು ಸ್ಥಾಪಿಸುವ ಸಲುವಾಗಿ ರಚಿಸಿರುವ ಉನ್ನತಾಧಿಕಾರದ ಸಮಿತಿಯಲ್ಲಿ ವ್ಯವಸ್ಥಾಪನಾ ಮಂಡಳಿಯ ಸದಸ್ಯರುಗಳನ್ನು ಸೇರಿಸಲು ಸಹ ಸಲಹೆ ನೀಡಿದರು.

| ಅನುಕ್ರಮ ಸಂ: 9 | **ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಪರಿನಿಯಮಗಳಿಗೆ ಒಪ್ಪಿಗೆ ನೀಡುವ ಕುರಿತು** |
|---|---|

**ಠರಾವು:**

ವ್ಯವಸ್ಥಾಪನಾ ಮಂಡಳಿಯ ಉಪಸಮಿತಿಗೆ ಕೇವಲ ನಾಲ್ಕು ಸದಸ್ಯರುಗಳಿರುವಂತೆ ಸೀಮಿತಗೊಳಿಸಿ ಹಾಗೂ ಪ್ರತಿ ಉಪಸಮಿತಿಗಳಿಗೆ ಅಧ್ಯಕ್ಷರನ್ನೊಳಗೊಂಡು ಒಟ್ಟು ಐದು ಸದಸ್ಯರುಗಳಿರುವಂತೆ ಸಲಹೆ ನೀಡಿ ದೀರ್ಘ ಚರ್ಚೆಯ ನಂತರ ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಪರಿನಿಯಮಗಳಿಗೆ ಘನ ವೇದಿಕೆಯು ಸರ್ವಾನುಮತದಿಂದ ಅನುಮೋದನೆ ನೀಡಿತು. ಮುಂದುವರೆದು, ದಿನಾಂಕ 9–7–2011 ರಂದು ಕೃವಿವಿ ಧಾರವಾಡದಲ್ಲಿ ಕೃವಿವಿ ಬೆಂಗಳೂರು, ಧಾರವಾಡ ಹಾಗೂ ರಾಯಚೂರಿನ ಅಧಿಕಾರೇತರ ಸದಸ್ಯರ ಹಾಗೂ ಮೂರು ಕೃವಿವಿಗಳ ಕುಲಸಚಿವರ ಸಭೆಯ ನಡುವಳಿಗಳಲ್ಲಿ "ಅಧಿಕಾರೇತರ ಸದಸ್ಯರುಗಳು" ಎಂಬುದರ ಬದಲಾಗಿ, ಕೇವಲ "ಸದಸ್ಯರು" ಎಂದು ಸರಿಪಡಿಸಲು ಸಲಹೆ ನೀಡಿದರು.

ಮುಂದುವರೆದು, ವೃಂದ ಮತ್ತು ನೇಮಕಾತಿ ನಿಯಮಾವಳಿಗಳ ಕುರಿತಾದ ಕೃವಿವಿ ನೌಕರರ ಹಾಗೂ ಶೀಘ್ರಲಿಪಿಗಾರರ / ಆಪ್ತ ಕಾರ್ಯದರ್ಶಿಗಳ / ಕಾರ್ಯದರ್ಶಿಗಳ ಅರ್ಜಿಗಳಿಗೆ ಸಂಬಂಧಿಸಿದಂತೆ, ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳನ್ನು (KCS Rules) ಕಟ್ಟುನಿಟ್ಟಾಗಿ ಪಾಲಿಸಲು ಮತ್ತು ಕರ್ನಾಟಕ ಸರಕಾರದ ಸಿಬ್ಬಂದಿ ಹಾಗೂ ಆಡಳಿತ ಸುಧಾರಣೆ ಇಲಾಖೆ (DPAR) ಗೆ ಸಂಪರ್ಕಿಸಲು ತೀರ್ಮಾನಿಸಲಾಯಿತು.

| ಹೆಚ್ಚುವರಿ ಅನುಕ್ರಮ ಸಂ: 1 | ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಭೂಮಿಯನ್ನು ರಾಯಚೂರು ಜಿಲ್ಲಾ ಆಡಳಿತ ಭವನದ ನಿರ್ಮಾಣಕ್ಕಾಗಿ ನೀಡುವ ಕುರಿತು |
|---|---|

ಠರಾವು:

ಸುದೀರ್ಘವಾದ ಚರ್ಚೆಯ ನಂತರ, ಮಾನ್ಯ ಮುಖ್ಯಮಂತ್ರಿಗಳು ದಿನಾಂಕ 17-9-2011 ರಂದು ಕೃವಿವಿ ಆವರಣಕ್ಕೆ ಭೇಟಿ ಕೊಟ್ಟ ಸಂದರ್ಭದಲ್ಲಿ ನೀಡಿದ ಸಲಹೆಯಂತೆ ರಾಯಚೂರು ಜಿಲ್ಲೆಯ ಸಮಸ್ತ ನಾಗರೀಕರ ಹಿತದೃಷ್ಟಿಯಿಂದ ಹಾಗೂ ಜಿಲ್ಲಾಧಿಕಾರಿಗಳು ರಾಯಚೂರು ಅವರು ವಿಶ್ವವಿದ್ಯಾಲಯಕ್ಕೆ ಹತ್ತಿಕೊಂಡಿರುವ 100 ಎಕರೆ ಜಮೀನನ್ನು ಪರ್ಯಾಯ ವ್ಯವಸ್ಥೆಯಾಗಿ ನೀಡುವ ಷರತ್ತಿನೊಂದಿಗೆ ರಾಯಚೂರು ಜಿಲ್ಲಾ ಆಡಳಿತ ಭವನದ ನಿರ್ಮಾಣಕ್ಕಾಗಿ ವಿಶ್ವವಿದ್ಯಾಲಯದ ಏಳು ಎಕರೆ ಭೂಮಿಯನ್ನು ನೀಡಲು ಘನ ವೇದಿಕೆಯು ಸರ್ವಾನುಮತದಿಂದ ಒಪ್ಪಿಗೆ ಸೂಚಿಸಿತು.

| ಹೆಚ್ಚುವರಿ ಅನುಕ್ರಮ ಸಂ: 2 | ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಆಡಳಿತ ಭವನದ ನಿರ್ಮಾಣ ಕಾಮಗಾರಿಗಾಗಿ ಅನುಮೋದನೆ ಕುರಿತು |
|---|---|

ಠರಾವು:

ವಿಸ್ತೃತವಾದ ಚರ್ಚೆಯ ನಂತರ, ಘನ ವೇದಿಕೆಯು ಈ ಕೆಳಕಂಡ ಟಿಪ್ಪಣಿಗಳೊಂದಿಗೆ ಸದರಿ ವಿಷಯವನ್ನು ಚರ್ಚೆಯಿಂದ ಮುಂದಕ್ಕೆ ಹಾಕಲಾಯಿತು. ಈ ತರಹದ ಕಾಮಗಾರಿಗಳನ್ನು ಪಿ.ಡಬ್ಲ್ಯು.ಡಿ.ಯ ಸೂಪರಿಂಟೆಂಡಿಂಗ್ ಇಂಜಿನಿಯರ್ ದರ್ಜೆಗಿಂತಲೂ ಕಡಿಮೆ ಇಲ್ಲದ ಅಥವ ಯಾವುದೇ ನೊಂದಾಯಿತ / ಅಂಗೀಕೃತ ಏಜೆನ್ಸಿಯವರಿಂದ ಅಂದಾಜು ಪತ್ರಿಕೆಗಳನ್ನು ಪರಶೀಲಿಸತಕ್ಕದ್ದು ಹಾಗೂ ಟೆಂಡರಿಂಗ್ ಪ್ರಕ್ರಿಯೆಯನ್ನು ಸರಕಾರದ ಇ-ಪ್ರೊಕ್ಯೂರ್‌ಮೆಂಟ್ ಪದ್ಧತಿಯಿಂದಲೇ ನಿರ್ವಹಿಸತಕ್ಕದ್ದು. ಆದುದರಿಂದ ಮೇಲಿನ ಅಂಶಗಳನ್ನು ಗಮನದಲ್ಲಿಟ್ಟುಕೊಂಡು, ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಆಡಳಿತ ಭವನದ ನಿರ್ಮಾಣ ಕಾಮಗಾರಿಯನ್ನು ಪುನ: ಟೆಂಡರ್ ಮಾಡಲು ಸಲಹೆ ನೀಡಲಾಯಿತು.

ಕುಲಸಚಿವರು ಹಾಗೂ ವ್ಯವಸ್ಥಾಪನಾ ಮಂಡಳಿಯ ಸದಸ್ಯ-ಕಾರ್ಯದರ್ಶಿಯವರ ಧನ್ಯವಾದಗಳೊಂದಿಗೆ ಸಭೆಯು ಮುಕ್ತಾಯಗೊಂಡಿತು.

| ಸಹಿ /- 29-9-2011 | ಸಹಿ /- 29-9-2011 |
|---|---|
| (ಬಿ.ವಿ. ಪಾಟೀಲ) | (ಪಿ. ಬಾಲಕೃಷ್ಣನ್) |
| ಕುಲಪತಿಗಳು ಹಾಗೂ ಅಧ್ಯಕ್ಷರು | ಕುಲಸಚಿವರು ಹಾಗೂ ಸದಸ್ಯ-ಕಾರ್ಯದರ್ಶಿ |
| ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು. | ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು. |

(ಪಿ. ಬಾಲಕೃಷ್ಣನ್)
ಕುಲಸಚಿವರು ಹಾಗೂ ಸದಸ್ಯ-ಕಾರ್ಯದರ್ಶಿ
ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು.

ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಎಲ್ಲಾ ಸದಸ್ಯರುಗಳಿಗೆ.

ಪ್ರತಿಯನ್ನು: ಮಾನ್ಯ ಕುಲಪತಿಗಳು ಹಾಗೂ ಅಧ್ಯಕ್ಷರು, ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು ಇವರಿಗೆ ಸಲ್ಲಿಸಲಾಗಿದೆ.